# ಸ್ಪೀಕರ್ ನಡೆ ಸ್ವಾಗತಾರ್ಹ

## ಚರ್ಚೆ ಇಲ್ಲದೇ ವಿಧೇಯಕ ಅಂಗೀಕಾರ ಇಲ್ಲ

ಯಾವುದೇ ವಿಧೇಯಕಕ್ಕೆ ಸದನದಲ್ಲಿ ಕನಿಷ್ಠ ಹತ್ತು ಸದಸ್ಯರು ಭಾಗವಹಿಸಿ ಚರ್ಚೆ ನಡೆಸದಿದ್ದರೆ, ಆ ವಿಧೇಯಕವನ್ನು ಅನುಮೋದನೆಗಾಗಿ ಮತಕ್ಕೆ ಹಾಕದಿರಲು ನೂತನ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ. ಶಾಸನಸಭೆಯ ಕಲಾಪದ ಗುಣಮಟ್ಟ ಸುಧಾರಣೆಯಲ್ಲಿ ಈ ನಿರ್ಧಾರ ಮಹತ್ವದ ಹೆಜ್ಜೆಯಾಗಲಿದೆ. ಅವರ ಈ ತೀರ್ಮಾನವು ನಿಜವಾಗಿಯೂ ಕಾರ್ಯರೂಪಕ್ಕೆ ಬಂದರೆ ವಿಧಾನಸಭೆಯಲ್ಲಿ ನಾವು ಗಂಭೀರ ಮತ್ತು ಅರ್ಥಪೂರ್ಣ ಚರ್ಚೆಗಳನ್ನು ಇನ್ನು ಮುಂದೆ ನಿರೀಕ್ಷಿಸಬಹುದು.

ಭಾರತದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಿದ ಸಂಸ್ಥೆಗಳ ಪೈಕಿ ನಮ್ಮ ಕರ್ನಾಟಕ ವಿಧಾನಸಭೆಯ ಪಾತ್ರವೂ ಹಿರಿದಾಗಿದ್ದು, ಅದಕ್ಕೆ ತನ್ನದೇ ಆದ ಘನತೆ ಇದೆ. ಈ ಸದನದಲ್ಲಿ ನಡೆದ ಚರ್ಚೆಗಳು, ತೆಗೆದುಕೊಂಡ ತೀರ್ಮಾನಗಳು ದೇಶದ ಬೇರೆ ಬೇರೆ ರಾಜ್ಯ ವಿಧಾನಸಭೆಗಳಲ್ಲಿ ಉಲ್ಲೇಖಗೊಂಡಿವೆ; ಸಂಸತ್ತಿನಲ್ಲೂ ಮೆಚ್ಚುಗೆ ಗಳಿಸಿವೆ. ಯಾವುದೇ ಒಂದು ವಿಷಯದ ಬಗ್ಗೆ, ಹೊಸ ಕಾನೂನು ಬಗ್ಗೆ ಕರ್ನಾಟಕದ ವಿಧಾನಸಭೆ ಚರ್ಚೆ ಮಾಡುತ್ತಿದೆ ಎಂದರೆ, ಇಡೀ ದೇಶವೇ ಕಿವಿಯಾಗಿ ಆಲಿಸುತ್ತಿತ್ತು.



ಆದರೆ, ಇತ್ತೀಚಿನ ವರ್ಷಗಳಲ್ಲಿ ಸದನದಲ್ಲಿ ನಡೆಯುವ ಚರ್ಚೆಗಳ ಗುಣಮಟ್ಟ ಕುಸಿದಿದೆ. ಯಾವುದೇ ನೀತಿ ನಿರೂಪಣೆಯನ್ನು ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಹಾಗಾಗಿ, ಸಂವಾದಕ್ಕೆ ಆಸ್ಪದವೇ ಇಲ್ಲ. ಒಮ್ಮೊಮ್ಮೆ ಮಂಡನೆಯಾಗುವ ವಿಧೇಯಕಗಳ ಬಗ್ಗೆ ಶಾಸಕರಿಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಹಾಗಿದ್ದ ಮೇಲೆ ಗಂಭೀರ ಚರ್ಚೆಯನ್ನು ನಿರೀಕ್ಷಿಸುವುದು ಹೇಗೆ?

ಈ ಪ್ರಮಾದಕ್ಕೆ ಆಡಳಿತ ಮತ್ತು ಪ್ರತಿಪಕ್ಷಗಳೆರಡೂ ಕಾರಣ. ಎರಡೂ ಕಡೆಯಿಂದಲೂ ತಮ್ಮದೇ ಆದ ಅಜೆಂಡಾಗಳನ್ನು ಮುಂದಿಟ್ಟುಕೊಂಡು ಗದ್ದಲದ ಕಲಾಪಕ್ಕೆ ಕಾರಣರಾಗುತ್ತಾರೆ. ಈ ಪ್ರವೃತ್ತಿ ಯಾವುದೇ ಒಂದು ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಸದನದಲ್ಲಾಗುವ ಈ ಪ್ರಮಾದದ ಪರಿಣಾಮಗಳು ವಿಧೇಯಕವು ಕಾನೂನಾಗಿ ಜಾರಿಗೊಳ್ಳುವ ಸಂದರ್ಭದಲ್ಲಿ ಪ್ರತಿಫಲನಗೊಳ್ಳುತ್ತವೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳು ನಮ್ಮ ಮುಂದಿವೆ.

ವರ್ಷಕ್ಕೆ 60 ದಿನಗಳಾದರೂ ಅಧಿವೇಶನ ನಡೆಯಬೇಕು. ಇತ್ತೀಚಿನ ವರ್ಷಗಳಲ್ಲಿ ಇಷ್ಟು ಪ್ರಮಾಣದಲ್ಲಿ ಅಧಿವೇಶನ ನಡೆದ ಉದಾಹರಣೆಗಳೇ ಇಲ್ಲ! ನಡೆಯುವ ಅಲ್ಪ ಕಾಲದ ಅಧಿವೇಶನ ಕೂಡ ಗದ್ದಲ, ಪ್ರತಿಷ್ಠೆಯ ಒಣ ಚರ್ಚೆಯಲ್ಲೇ ಕಳೆದು ಹೋಗಿ ಬಿಡುತ್ತದೆ. ಪ್ರಸಕ್ತ ಸಾಲಿನ ಬಜೆಟ್ ಅಧಿವೇಶನವೇ ಇದಕ್ಕೆ ಸಾಕ್ಷಿ. ಈ ಅಧಿವೇಶನದಲ್ಲಿ ಹಲವು ಮಹತ್ವದ ವಿಧೇಯಕಗಳು ಚರ್ಚೆ ಇಲ್ಲದೆಯೇ ಅನುಮೋದನೆಗೊಂಡಿವೆ. ಇದು ಸಂಪೂರ್ಣವಾಗಿ ಸಂಸದೀಯ ವ್ಯವಸ್ಥೆಗೆ ವಿರುದ್ಧವಾದ ನಡೆ. ಹಣಕಾಸು, ಶಿಕ್ಷಣ, ಆರೋಗ್ಯ ಮತ್ತು ಕಾನೂನು ಇಲಾಖೆಗೆ ಸಂಬಂಧಿಸಿದ ಅನೇಕ ವಿಧೇಯಕಗಳು ಯಾವುದೇ ಚರ್ಚೆ ಇಲ್ಲದೇ ಅನುಮೋದನೆಗೊಂಡ ಉದಾಹರಣೆಗಳಿವೆ. ನಿರ್ದಿಷ್ಟ ದಿನಗಳಿಗೆ ಅಧಿವೇಶನ ಕರೆದು, ಮುಕ್ತಾಯದ ದಿನ ಒಮ್ಮೆಗೇ ಎಲ್ಲ ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳುವ ಕೆಟ್ಟ ಸಂಪ್ರದಾಯ ಇತ್ತೀಚಿನ ಹೆಚ್ಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ.

ಎಸ್. ನಿಜಲಿಂಗಪ್ಪ, ದೇವರಾಜ ಅರಸು, ರಾಮಕೃಷ್ಣ ಹೆಗಡೆ ಅವರ ಕಾಲಘಟ್ಟದಲ್ಲಿ ಈ ವಿಧಾನಸಭೆ ಅತ್ಯದ್ಭುತವಾದ ಚರ್ಚೆಗೆ ಸಾಕ್ಷಿಯಾಗಿದೆ. ಆಗ ಜನಪ್ರತಿನಿಧಿಗಳೂ ವಿಧೇಯಕದ ಮಹತ್ವವನ್ನು ಅರಿತುಕೊಂಡು ಅದರ ಮೇಲೆ ಅಧ್ಯಯನ ಕೈಗೊಂಡು ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂಥದ್ದೇ ಪರಿಸ್ಥಿತಿಯನ್ನು ಸೃಷ್ಟಿಸುವುದು ಅಸಾಧ್ಯವಾದುದೇನೂ ಅಲ್ಲ. ವಿಧಾನಸಭೆಯ ಪೋಷಕರಾಗಿರುವ ಸ್ಪೀಕರ್ ಅವರು ಈ ದಿಸೆಯಲ್ಲಿ ಒಂದಿಷ್ಟು ಗಂಭೀರ ಕ್ರಮಗಳನ್ನು ಕೈಗೊಂಡರೆ ಸಾಧ್ಯವಾದೀತು. ಹಾಗಾಗಿ, ಸ್ಪೀಕರ್ ಕಾಗೇರಿ ಅವರು ಕೈಗೊಂಡಿರುವ ನಿರ್ಧಾರವನ್ನು ನಾವು ಸ್ವಾಗತಿಸೋಣ ಮತ್ತು ಅದು ಯಾವುದೇ ಅಡೆ ತಡೆ ಇಲ್ಲದೇ ಅನುಷ್ಠಾನಗೊಳ್ಳಲಿ.